**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>**
**CC No: 262/2020**

CW :3 PW:4
ಹೆಸರು : ಅಬ್ದುಲ್ ರಸೀದ
ತಂದೆಯ ಹೆಸರು : ಸೈಯದ್‌ಸಾಬ
ವಯಸ್ಸು : 34 ವರ್ಷ
ಉದ್ಯೋಗ : ಕೂಲಿ ಕೆಲಸ
ಸ್ಥಳ : ಶಹಾಬಾದ

**(ದಿನಾಂಕ: 21-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ</u>**

ಸಾಕ್ಷಿಯ ಸಹಿ ಇರುವ ದಾಖಲೆ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2 (ಬಿ) ಎಂದು ಗುರುತಿಸಲಾಯಿತು. ನನಗೆ ಚಾಸಾ-1 ಮತ್ತು 2 ಇವರ ಪರಿಚಯ ಇರುವುದಿಲ್ಲ. ಪೋಲೀಸರು ನನ್ನನ್ನು ಎಲ್ಲಿಯೂ ಕರೆಸಿಲ್ಲ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ. ಈಗ ಸುಮಾರು ಎರಡು ವರ್ಷಗಳ ಹಿಂದೆ ಮಜೀದ್ ಚೌಕ ಸಹಿ ಮಾಡಿರುತ್ತೇನೆ. ಅದು ಯಾವ ದಾಖಲೆ ಅದರಲ್ಲಿ ಏನು ಬರೆದಿದ್ದಾರೆ ಎಂಬುವುದು ನನಗೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

**<u>ಪಾಟೀ ಸವಾಲು: ಸ.ಸ. ಅಭಿಯೋಜಕರಿಂದ</u>**

ದಿನಾಂಕ: 05-09-2019 ರಂದು ಚಾಸಾ-1 ರವರು ನನ್ನನ್ನು ಮತ್ತು ಚಾಸಾ-2 ಇವರನ್ನು ಪಂಚರ ಅಂತಾ ಕರೆಯಿಸಿದ ಮೇರೆಗೆ ಶಹಾಬಾದದ ಲಕ್ಷ್ಮೀ ಗಂಜ್ ಏರಿಯಾದ ಬಾದಲ್ ಅವರ ಮನೆಯ ಹತ್ತಿರ ಬಂದು 12-00 ಹಾಜರಾಗಿದ್ದೇವೆ ಅಂದರೆ ಸರಿಯಲ್ಲ. ಅಲ್ಲಿ ಚಾಸಾ1 ರವರು ಶಹಾಬಾದ ಪೋಲೀಸ್ ಠಾಣೆಯ ಪಿ. ಐ ಮತ್ತು ಇತರೆ ಸಿಬ್ಬಂದಿಗಳು ಹಾಜರಿದ್ದು, ಚಾಸಾ-1 ರವರು ಬಾದಲ್ ರವರ ಮನೆಯ ಒಂದು ಕೋಣೆಯಲ್ಲಿ ಹಾಗೂ ಒಂದನೇ ಮಹಡಿಯ ಒಂದು ಕೋಣೆಯ ಪಡಿತರ ಆಹಾರ ಧಾನ್ಯಗಳಾದ ಅಕ್ಕಿ, ಗೋಧಿ, ತೊಗರಿ ಬೇಳೆಯ ಚೀಲಗಳು ಮೂಟೆ ಕಟ್ಟಿ ಶೇಖರಿಸಿಟ್ಟಿದನ್ನು ತೋರಿಸಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಅಹಾರ ಧಾನ್ಯಗಳು ಸರ್ಕಾರದಿಂದ ಪಡಿತರಿಗೆ ಹಂಚುವ ಆಹಾ ಧಾನ್ಯಗಳಾಗಿದ್ದು, ಕಾಳ ಸಂತೆಯಲ್ಲಿ ಖರೀದಿಸಿ ಮುಂದೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಸಂಗ್ರಹಿಸಿಟ್ಟಿದ್ದು, ನೋಡಿ ಜಪ್ತಿ ಪಂಚನಾಮೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿ ಮನೆಯು ಉತ್ತರ ದಿಕ್ಕಿಗೆ ಇದ್ದು, ಅದಕ್ಕೆ ಹೊಂದಿ ಪೂರ್ವಕ್ಕೆ ಇನ್ನೊಂದು ಬಾಗಿಲು ಇದ್ದು, ಕೋಣೆಯಲ್ಲಿದ್ದ ಮೂಟೆ ಕಟ್ಟಿದ ಚೀಲಗಳನ್ನು ಪರಿಶೀಲಿಸಲು ಪಡಿತರಿಗೆ ಹಂಚುವ ಅಹಾರ ಧಾನ್ಯಗಳು ಇದ್ದವು ಅದರಂತೆ 1 ನೇ ಮಹಡಿಯಲ್ಲಿ ಕೂಡಾ ಪ್ಲಾಸ್ಟಿಕ ಚೀಲದಲ್ಲಿ ಹಾಗೂ ಗೋಣಿ ಚೀಲದಲ್ಲಿ ಮೂಟೆ ಕಟ್ಟಿದು ನೋಡಿ ಪರಿಶಿಲಿಸಿದ್ದೇವೆ ಅಂದರೆ ಸರಿಯಲ್ಲ. 1) ಅಕ್ಕಿ 71 ಕ್ವಿಂಟಲ್ , 2) ಗೋಧಿ 2 ಕ್ವಿಂಟಲ್ 52 ಕೆ. ಜಿ. 3) ತೊಗರಿ ಬೇಳೆ 1 ಕ್ವಿಂಟಲ್ 26 ಕೆ. ಜಿ ಇದ್ದು ಇವುಗಳನ್ನು ಚಾಸಾ-2 ಮತ್ತು ನನ್ನ ಸಮಕ್ಷಮ ಜಪ್ತಿಪಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಗುನ್ನಾ ಸ್ಥಳದ ಚಕಬಂಧಿ ಪೂರ್ವಃ ಮನೆಯ ಮುಂದೆ ಲಕ್ಷ್ಮೀ ಗಂಜ್ ಸಿ. ಸಿ. ರಸ್ತೆ, ಪಶ್ಚಿಮಕ್ಕೆಃ ಬಾದಲ್ ರವರ ಮನೆ, ಉತ್ತರಕ್ಕೆಃ ಮನೆಗೆ ಹೊಂದಿ ಏರಟೆಲ್ ಟವರ್ , ದಕ್ಷಿಣಕ್ಕೆಃ ಮನೆ ಇದ್ದು ಜಪ್ತಿ ಪಂಚನಾಮೆಯನ್ನು 12-00 ರಿಂದ 03-30 ರವರೆಗೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ಅಂಶಗಳು ನನಗೆ ಗೊತ್ತಿರುವುದಿಲ್ಲ .

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ಹೇಳುತ್ತಾರೆ.

**ಮರುವಿಚಾರಣೆ: ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**

**-Sd-**

**ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಶಹಬಾದ.**